





# ರೇಡಿಯೊ ಕಿಯಾಸ್ಕ್

ಕೋಲಾರ ನಗರದ ಸರ್ವಜ್ಞ ಉದ್ಯಾನವನದಲ್ಲಿರುವ ಈ ಕಟ್ಟಡ ರೇಡಿಯೊ ಕಿಯಾಸ್ಕ್‌ನದ್ದು. ಇದರ ನಿರ್ಮಾತೃ ಚಿಕ್ಕನಂಜಪ್ಪ ಶೆಟ್ಟಿ. 1940ರಲ್ಲಿ ಈ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ. ಇದು ಸಾರ್ವಜನಿಕರು ಬಾನುಲಿ ಕೇಳಲು ಕಲ್ಪಿಸಲಾದ ಅಂದಿನ ವ್ಯವಸ್ಥೆ. ರೇಡಿಯೊ ಎಲ್ಲರಿಗೂ ಸುಲಭವಾಗಿ ಕೈಗೆಟುಕುವ ಸಾಧನವಾಗಿರಲಿಲ್ಲ. ಮೈಸೂರಿನ ಮಹಾರಾಜರು ಮೈಸೂರಿನ ಜನರಿಗಾಗಿ ಈ ರೀತಿಯ ವ್ಯವಸ್ಥೆ ಮಾಡಿಕೊಟ್ಟಿದ್ದರೆಂದು ಓದಿದ ನೆನಪಿದೆ.

ನಂತರ 80ರ ದಶಕದಲ್ಲಿ ಇಲ್ಲಿಂದ ದೂರದರ್ಶನದ ಕಾರ್ಯಕ್ರಮಗಳ ವೀಕ್ಷಣೆಗೂ ವ್ಯವಸ್ಥೆ ಕಲ್ಪಿಸಲಾಗಿತ್ತು. ಅಲ್ಲದೆ ಇಲ್ಲಿ ಸಂಗೀತ ಕಾರ್ಯಕ್ರಮಗಳನ್ನೂ ಸಹ ಆಯೋಜಿಸಲಾಗುತ್ತಿತ್ತು ಎಂದು ಕೆಲವರು ಮೆಲುಕು ಹಾಕುತ್ತಾರೆ. ಈಗ ಈ ಕಟ್ಟಡದಲ್ಲಿ ಯಾವ ಚಟುವಟಿಕೆಯೂ ನಡೆಯುತ್ತಿಲ್ಲ. ಆದರೆ ಕಟ್ಟಡ ಮಾತ್ರ ಈಗಲೂ ದಾನಿ ಚಿಕ್ಕನಂಜಪ್ಪ ಶೆಟ್ಟರ ಹೆಸರನ್ನು ಹೊತ್ತು ಹಾಗೇ ನಿಂತಿದೆ, ಉದ್ಯಾನವೂ ಸ್ಥಿರವಾಗಿದೆ! ಸೂಕ್ತ ನಿರ್ವಹಣೆ ಇಲ್ಲದೆ ಸೊರಗಿದೆ!

–ರಾಗಿರಾಯ, ಕೋಲಾರ

# ಪಂಡರಿಬಾಯಿ ಚಿತ್ರ ಮಂದಿರ!

ಕನ್ನಡ ಚಿತ್ರರಂಗದ ಯಶಸ್ವಿ ನಟಿಯಾಗಿ ನಟಿಸಿ ನಂತರ ಕನ್ನಡ ಚಿತ್ರರಂಗವೂ ಸೇರಿದಂತೆ ಹಿಂದಿ, ತಮಿಳು, ತೆಲುಗು ಭಾಷೆಗಳಲ್ಲಿ ನಟಿಸಿದ ಖ್ಯಾತಿ ಪಂಡರಿಬಾಯಿ ಅವರದ್ದು. ಒಂದು ಕಾಲದಲ್ಲಿ ಎಲ್ಲ ನಾಯಕ ನಟರ 'ಅಮ್ಮ' ಎಂದೇ ಹೆಸರು ಮಾಡಿದ್ದ ಅವರು ಈಗ ಇತಿಹಾಸ.

ಆದರೆ, ಅವರ ನೆನಪು ಸದಾ ಚಿರಸ್ಥಾಯಿಯಾಗಿಸುವ ನಿಟ್ಟಿನಲ್ಲಿ ಒಂದು ಚಿತ್ರಮಂದಿರ ನಿರ್ಮಾಣವಾಗಿದೆ. ಅದುವೇ ಮೈಸೂರಿನ ಪಂಡರಿಬಾಯಿ ಚಿತ್ರಮಂದಿರ. ಪಂಡರಿಬಾಯಿ ಹೆಸರಿನಲ್ಲಿ ಚಿತ್ರಮಂದಿರ ಇರುವುದು ಬಹಳಷ್ಟು ಮಂದಿಗೆ ಗೊತ್ತೇ ಇಲ್ಲ. ಮೈಸೂರಿನ ಪ್ರಸಿದ್ಧ ಕಲಾಮಂದಿರದ ಸುಂದರ ದಟ್ಟ ಹಸಿರಿನ ಆವರಣದಲ್ಲಿರುವ ಈ ಚಿತ್ರಮಂದಿರವು ಆಕರ್ಷಕವಾಗಿ ಕಾಣುತ್ತದೆ. ಕಲಾ ಮಂದಿರದ ಆಡಳಿತ ಮಂಡಳಿಯ ಕ್ರಿಯಾಶೀಲತೆಯ ಫಲವಾಗಿ ಉತ್ತಮ ಚಿತ್ರಗಳು ಮತ್ತು ಚಲನ ಚಿತ್ರೋತ್ಸವದ ಸಂದರ್ಭದಲ್ಲಿ ಹಾಗೂ ಭಾನುವಾರ ಮತ್ತು ರಜಾ ದಿನಗಳಲ್ಲಿ ಸಿನಿಮಾಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ಪಂಡರಿಬಾಯಿ ಅವರ ಹೆಸರಿನಲ್ಲೂ ಒಂದು ಚಿತ್ರಮಂದಿರ ಇದೆ ಎಂಬುದೇ ಎಷ್ಟೋ ಮಂದಿಗೆ ಗೊತ್ತೇ ಇಲ್ಲ. ಈಚೆಗೆ ಇಲ್ಲಿನ ಕಲಾ ಮಂದಿರದಲ್ಲಿ ಆಯೋಜಿಸಿದ್ದ ನಾಟಕೋತ್ಸವಕ್ಕೆ ಹೋಗಿದ್ದಾಗ ಈ ಚಿತ್ರಮಂದಿರ ಹಾಗೂ ಅದರ ಹೆಸರು ಬಹುವಾಗಿ ಆಕರ್ಷಿಸಿತು.

–ಆರ್. ವೀರೇಶ್ ಕುಮಾರ್, ಬೆಂಗಳೂರು





# ಮುಖಾಮುಖಿ...!

ಒಂದು ಬೆಳಿಗ್ಗೆ ನಮ್ಮ ಮನೆಯ ಪಕ್ಕದಲ್ಲಿರುವ ಜನವಾಸವಿಲ್ಲದ ಮನೆಯಿಂದ ಭರ್ ಭರ್ ಭರ್, ಟಕ್ ಟಕ್ ಟಕ್ ಎಂಬ ಶಬ್ದ ಕೇಳತೊಡಗಿತು. ಕುತೂಹಲದಿಂದ ಹೋಗಿ ನೋಡಿದೆ. ನೀಳವಾದ ಗರಿಗಳನ್ನು ಹೊದ್ದ ಸುಂದರವಾದ ಗಂಡು ನವಿಲು ಕಂಡಿತು. ಅಲ್ಲೇ ನಿಲ್ಲಿಸಿದ್ದ ಸ್ಕೂಟರಿನ ಸುತ್ತಲೂ ಭರದಿಂದ ಸುತ್ತುತ್ತಿದ್ದ ಅದು ಕನ್ನಡಿಗೆ, ಬೈಕ್‌ನ ಹೊಳೆಯುವ ಮೇಲ್ಮೈಗೆ ಕೊಕ್ಕಿನಿಂದ ಬಲವಾಗಿ ಕುಟ್ಟುತಿತ್ತು. ಕೂಡಲೇ ಅದನ್ನು ಕ್ಯಾಮೆರಾದಲ್ಲಿ ಸೆರೆಹಿಡಿದೆ. ನನ್ನ ಇರುವಿಕೆಯ ಪರಿವೆಯೇ ಇಲ್ಲದಂತೆ ನವಿಲು ತನ್ನ ರೋಷಾವೇಶ ಮುಂದುವರಿಸಿತ್ತು. 'ಹೀಗೆ ಬಿಟ್ಟರೆ ಸ್ಕೂಟರ್ ಮೇಲೆಲ್ಲಾ ಗೀಚು ಗಾಯಗಳಾಗಿ ಹಾಳಾದೀತು' ಎಂದು ಆ ನವಿಲನ್ನು ದೂರ ಓಡಿಸಿದೆ.

ಕನ್ನಡಿಯಲ್ಲಿ ಕಾಣುವ ತನ್ನ ಪ್ರತಿಬಿಂಬವನ್ನು ನೋಡಿ ಕುಟುಕುವ ಒಂದು ಮಡಿವಾಳ ಹಕ್ಕಿಯ ರೋಚಕ ಕಥನವನ್ನು ಪೂರ್ಣಚಂದ್ರ ತೇಜಸ್ವಿಯವರು ತಮ್ಮ 'ಪರಿಸರದ ಕಥೆ'ಯಲ್ಲಿ ಬರೆದಿದ್ದಾರೆ. ಇದು ಬರಿ ಕಾಲ್ಪನಿಕವಲ್ಲ, ನಿಜ ಜೀವನದಲ್ಲೂ ನಡೆಯುವ ಒಂದು ಅಚ್ಚರಿ ಎಂದು ಅರಿವಾಯಿತು.

–ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ